ಸಂಪಾದಕ : ಶ. ಮಂಜುನಾಥ
ಎಂ.ಎ., ಬಿ.ಇಡಿ., ಎಲ್ ಎಲ್.ಬಿ., ಡಿ.ಜೆ.ಸಿ.,
ಸಹ ಸಂಪಾದಕರು : ಶ್ರೀಮತಿ ಸುಮನಾ ಎಸ್. ಅಂಗಡಿ
ಬಿ.ಕಾಂ., ಎಲ್ ಎಲ್.ಎಂ., ಪಿ.ಜಿ.ಡಿ.ಎಂ.ಎಂ.,
ದೂರವಾಣಿ /ಫ್ಯಾಕ್ಸ್ : ೦೮೧೯೪ – ೨೨೫೦೪೮
ಅಲೆಯುಬಿ : ೯೪೪೮೧ ೨೭೮೦೫, ೯೪೪೯೦ ೬೪೪೪೬
RNI No. 58132/94 (DELHI)
Title Code : KAR KAN 07048
KA/SK/CTA - 264/2021-2023
Posted at Chickpete SO, Chitradurga

ಸುದ್ದಿ ಗಿಡುಗ

'ಸುದ್ದಿ ಬಿಡುದ' ದಿನ ಪತ್ರಿಕೆ ಚಿತ್ರದುರ್ಗದ ಹೆಮ್ಮೆಯ ದೈನಿಕ ಮತ್ತು ಜಿಲ್ಲೆಯ ಪ್ರಪ್ರಥಮ ಅಂತರ್ಜಾಲ ದಿನ ಪತ್ರಿಕೆ
:: ಅಂತರ್ಜಾಲ ತಾಣ ::
http://suddigiduga.blogspot.com
E-mail :
suddigiduga@gmail.com
news.manju@gmail.com

ಚಿತ್ರದುರ್ಗ ದಿನಾಂಕ : ೨೧-೦೫-೨೦೨೨ ಶನಿವಾರ ಸಂಪುಟ : ೨೯ ಸಂಚಿಕೆ : ೨೩೯ ಪುಟಗಳು-೦೨ ಬೆಲೆ : ೧-೫೦ ರೂ.
Chitradurga 21-05-2022 Saturday Volume : 29 Issue : 239 Pages-02

ಗ್ರಾ.ಪಂ.ಗಳಿಗೆ ಹೆಚ್ಚಿನ ಅಧಿಕಾರ : ಗ್ರಾ.ಪಂ. ಆಡಳಿತ ಅನುಕೂಲಕ್ಕೆ ಗ್ರಾಮಸೌಧ ನಿರ್ಮಾಣ : ಬಿ.ಸಿ. ಪಾಟೀಲ್

ಚಿತ್ರದುರ್ಗ, ಮೇ ೨೦

ಮಹಾತ್ಮ ಗಾಂಧೀಜಿ ಕಂಡಂತಹ ಗ್ರಾಮ ಸ್ವರಾಜ್ಯದ ಕನಸು ನನಸು ಮಾಡಲು ಅಧಿಕಾರ ವಿಕೇಂದ್ರೀಕರಣ ತತ್ತ್ವದ ಅಡಿ ಗ್ರಾಮ ಪಂಚಾಯತಿಗಳಿಗೆ ಹೆಚ್ಚಿನ ಅಧಿಕಾರ ನೀಡಲಾಗಿದೆ. ಬೆಂಗಳೂರಿನಲ್ಲಿ ರಾಜ್ಯದ ಆಡಳಿತ ನಡೆಸಲು ವಿಧಾನ ಸೌಧ ಇದ್ದ ಹಾಗೆ, ಪ್ರತಿ ಗ್ರಾಮ ಪಂಚಾಯತಿಗೂ ಆಡಳಿತದ ಅನುಕೂಲಕ್ಕಾಗಿ ಗ್ರಾಮ ಸೌಧ ನಿರ್ಮಿಸಲು ಸರ್ಕಾರ ಚಿಂತನೆ ನಡೆಸಿದೆ ಎಂದು ಕೃಷಿ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಬಿ.ಸಿ. ಪಾಟೀಲ್ ಹೇಳಿದರು.

ಅವರು ತಾಲೂಕಿನ ಬ್ಯಾಲಹಾಳ್ ಗ್ರಾಮದಲ್ಲಿ ೪೮ ಲಕ್ಷ ವೆಚ್ಚದಲ್ಲಿ ನೂತನವಾಗಿ ನಿರ್ಮಿಸಲಾಗಿರುವ ಗ್ರಾಮಸೌಧ ಕಟ್ಟಡ ಉದ್ಘಾಟಿಸಿ ಮಾತನಾಡಿದರು.

ಗ್ರಾಮಗಳ ಅಭಿವೃದ್ಧಿಯ ಅನುದಾನಕ್ಕಾಗಿ ಶಾಸಕರು ಹಾಗೂ ಮಂತ್ರಿಗಳ ದುಂಬಾಲು ಬೀಳುವ ಪರಿಸ್ಥಿತಿ ಈಗ ಇಲ್ಲ. ಗ್ರಾಮದ ಅಭಿವೃದ್ಧಿ ಕಾಮಗಾರಿಗಳ ಕ್ರಿಯಾ ಯೋಜನೆಗಳನ್ನು ತಯಾರಿಸಿ, ಸ್ವತಃ ಅನುಮೋದನೆ ನೀಡುವ ಅಧಿಕಾರವನ್ನು ಗ್ರಾಮ ಪಂಚಾಯತಿ ಅಧ್ಯಕ್ಷರು ಹಾಗೂ ಸದಸ್ಯರಿಗೆ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ನೀಡಿವೆ.

ಸರ್ಕಾರದ ಸೌಲಭ್ಯಗಳನ್ನು ಅರ್ಹ ಫಲಾನುಭವಿಗಳಿಗೆ ತಲುಪಿಸಬೇಕು. ಗ್ರಾಮದಲ್ಲಿ ಉತ್ತಮ ಕೆಲಸ ಮಾಡುವುದರ ಮೂಲಕ ಜನರ ಅಭಿಮಾನವನ್ನು ಸಂಪಾದಿಸಬೇಕು. ಕೇಂದ್ರ ಹಾಗೂ ರಾಜ್ಯ ಸರ್ಕಾರ ೨೫ ಜನ ಸದಸ್ಯರು ಇರುವಂತಹ ಗ್ರಾಮ ಪಂಚಾಯತಿಗೆ ೪೦ ಮನೆಗಳು, ೧೫ ಜನ ಸದಸ್ಯರು ಇರುವಂತಹ ಗ್ರಾಮ ಪಂಚಾಯತಿಗೆ ೩೦ ಮನೆಗಳು, ೧೫ ಜನಕ್ಕಿಂತ ಕಡಿಮೆ ಇರುವಂತಹ ಗ್ರಾಮ ಪಂಚಾಯತಿಗೆ ೨೦ ಮನೆಗಳನ್ನು ನೀಡಿದೆ. ಸೂಕ್ತ ಫಲಾನುಭವಿಗಳನ್ನು ಆಯ್ಕೆ ಮಾಡಿ ಯೋಜನೆಯ ಸದುಪಯೋಗ ಪಡೆದುಕೊಳ್ಳಬೇಕು ಎಂದರು.

ಬ್ಯಾಲಹಾಳ್ ಗ್ರಾಮದಲ್ಲಿ ರಾಜ್ಯಕ್ಕೆ ಮಾದರಿ ಎನಿಸುವ ಗ್ರಾಮ ಸೌಧವನ್ನು ಇಲ್ಲಿನ ಅಧ್ಯಕ್ಷರು ಹಾಗೂ ಸದಸ್ಯರು ಸಾಕಷ್ಟು ಆಸಕ್ತಿ ವಹಿಸಿ ನಿರ್ಮಿಸಿದ್ದಾರೆ. ಸರ್ಕಾರದ ಅನುದಾನದ ಜೊತೆಗೆ ವಂತಿಕೆ ಹಣವನ್ನು ಸಂಗ್ರಹಿಸಿ ಭವ್ಯವಾದ ಗ್ರಾಮಸೌಧ ನಿರ್ಮಿಸಿರುವುದು ಮಾದರಿಯಾಗಿದೆ ಎಂದು ಸಚಿವ ಬಿ.ಸಿ.ಪಾಟೀಲ್ ಪ್ರಶಂಸಿಸಿದರು.

ನೂತನ ಶಾಲಾ ಕೊಠಡಿಗಳ ಉದ್ಘಾಟನೆ ರಸ್ತೆ ಕಾಮಗಾರಿಗೆ ಭೂಮಿ ಪೂಜೆ : ಬ್ಯಾಲಹಾಳ್ ಸರ್ಕಾರಿ ಹಿರಿಯ ಪ್ರಾಥಮಿಕ ಪಾಠಶಾಲೆಯಲ್ಲಿ ಶಾಸಕರ ೨೦ ಲಕ್ಷ ರೂಪಾಯಿ ಅನುದಾನದಲ್ಲಿ ನಿರ್ಮಿಸಲಾಗಿರುವ ೦೩ ಶಾಲಾ ಕೊಠಡಿಗಳನ್ನು ಕೃಷಿ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಬಿ.ಸಿ. ಪಾಟೀಲ್ ಉದ್ಘಾಟಿಸಿದರು. ಕಬ್ಬಿಗೇರಿ ಗ್ರಾಮದಿಂದ ಬ್ಯಾಲಹಾಳ್ ಗ್ರಾಮ ಪಂಚಾಯತಿ ಸಂಪರ್ಕಿಸುವ ೧೫ ಲಕ್ಷ ರೂಪಾಯಿ ವೆಚ್ಚದ ರಸ್ತೆ ಕಾಮಗಾರಿಗೆ ಭೂಮಿ ಪೂಜೆ ನೆರವೇರಿಸಿದರು.

ಈ ಸಂದರ್ಭದಲ್ಲಿ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮದ ಅಧ್ಯಕ್ಷ ಹಾಗೂ ಶಾಸಕ ಎಂ. ಚಂದ್ರಪ್ಪ, ಜಿಲ್ಲಾಧಿಕಾರಿ ಕವಿತಾ ಎಸ್. ಮನ್ನಿಕೇರಿ, ಜಿ.ಪಂ. ಸಿಇಓ ಡಾ॥ ಕೆ. ನಂದಿನಿದೇವಿ, ಗ್ರಾಮ ಪಂಚಾಯತಿ ಅಧ್ಯಕ್ಷ ಕೃಷ್ಣಮೂರ್ತಿ, ತಾ.ಪಂ. ಇಓ ಎಚ್. ಹನುಮಂತಪ್ಪ, ಪಂ. ಅಭಿವೃದ್ಧಿ ಅಧಿಕಾರಿ ಮೊಯಿನ್ ಆಸ್ಮಾ ಸೇರಿದಂತೆ ಇತರೆ ಗ್ರಾ.ಪಂ. ಸದಸ್ಯರಿದ್ದರು.

ಮೀಸಲಾತಿ : ಶ್ರೀಗಳ ಧರಣಿಗೆ ಬೆಂಬಲಿಸಿ, ನಾಯಕ ಸಮಾಜ ಹಾಗೂ ಪರಿಶಿಷ್ಟ ಜಾತಿ ಅವರ ಜೊತೆಗೂಡಿ ಬೃಹತ್ ಪ್ರತಿಭಟನೆ



ಚಿತ್ರದುರ್ಗ, ಮೇ ೨೦

ಶೇ. ೭.೫ ರಷ್ಟು ಮೀಸಲಾತಿಗಾಗಿ ರಾಜ್ಯ ಸರ್ಕಾರವನ್ನು ಒತ್ತಾಯಿಸಿ ರಾಜನಹಳ್ಳಿ ವಾಲ್ಮೀಕಿ ಗುರುಪೀಠದ ಪ್ರಸನ್ನಾನಂದಸ್ವಾಮಿಗಳು ಬೆಂಗಳೂರಿನ ಫ್ರೀಡಂ ಪಾರ್ಕಿನಲ್ಲಿ ಅಹೋರಾತ್ರಿ ನಡೆಸುತ್ತಿರುವ ಧರಣಿಗೆ ಬೆಂಬಲಿಸಿ ನಾಯಕ ಸಮಾಜ ಹಾಗೂ ಪರಿಶಿಷ್ಟ ಜಾತಿಯವರು ಜೊತೆಗೂಡಿ ನಗರದಲ್ಲಿ ಇಂದು ಬೃಹತ್ ಪ್ರತಿಭಟನೆ ನಡೆಸಿ ಜಿಲ್ಲಾಡಳಿತದ ಮೂಲಕ ರಾಜ್ಯ ಸರ್ಕಾರಕ್ಕೆ ಮನವಿ ಸಲ್ಲಿಸಿದರು.

ಗಾಂಧಿವೃತ್ತದಿಂದ ಮೆರವಣಿಗೆ ಮೂಲಕ ಒನಕೆ ಓಬವ್ವ ವೃತ್ತಕ್ಕೆ ಆಗಮಿಸಿದ ಪ್ರತಿಭಟನೆಯನ್ನುದ್ದೇಶಿಸಿ ಮಾತನಾಡಿದ ಜೆಡಿಎಸ್ ಜಿಲ್ಲಾಧ್ಯಕ್ಷ ಡಿ. ಯಶೋಧರ ಶೇ. ೭.೫ ಮೀಸಲಾತಿಗಾಗಿ ಪ್ರಸನ್ನಾನಂದಸ್ವಾಮಿಗಳು ಕಳೆದ ನೂರು ದಿನಗಳಿಂದ ಧರಣಿ ನಡೆಸುತ್ತಿದ್ದರು ರಾಜ್ಯ ಸರ್ಕಾರ ನಾಯಕ ಸಮಾಜವನ್ನು ನಿರ್ಲಕ್ಷೆ ಮಾಡುತ್ತಿದೆ.

ನ್ಯಾಯಯುತವಾದ ಹಕ್ಕುಗಳಿಗಾಗಿ ನಾಯಕ ಸಮಾಜ ಬೀದಿಗಿಳಿದು ಹೋರಾಡಬೇಕಾಗಿದೆ. ಎಚ್.ಡಿ. ಕುಮಾರಸ್ವಾಮಿ ರಾಜ್ಯದ ಮುಖ್ಯಮಂತ್ರಿಯಾಗಿದ್ದಾಗ ನಾಗಮೋಹನ್ ದಾಸ್ ಆಯೋಗ ರಚಿಸಿ ಅದರ ವರದಿಯನ್ವಯ ಮೀಸಲಾತಿ ದೊರಕಿಸುವ ಆಶ್ವಾಸನೆ ಕೊಟ್ಟಿದ್ದರು. ಕೇಂದ್ರ ಮತ್ತು ರಾಜ್ಯ ಬಿಜೆಪಿ ಸರ್ಕಾರದ ವರ್ತನೆ ಸರಿಯಲ್ಲ. ರಾಜ್ಯ ಬಿಜೆಪಿ ಸರ್ಕಾರ ನಿಮ್ಮ ಬೇಡಿಕೆಗಳನ್ನು ಈಡೇರಿಸದಿದ್ದರೆ ಮುಂದೆ ಬೆಲೆ ತೆರಬೇಕಾಗುತ್ತದೆಂದು ಎಚ್ಚರಿಸಿದರು.

ಜಿಲ್ಲಾ ನಾಯಕ ಸಮಾಜದ ಅಧ್ಯಕ್ಷ ಎಚ್.ಜೆ. ಕೃಷ್ಣಮೂರ್ತಿ ಮಾತನಾಡಿ, ನಾಯಕ ಸಮಾಜಕ್ಕೆ ಶೇ. ೭.೫ ಮೀಸಲಾತಿಗಾಗಿ ನಮ್ಮ ಸ್ವಾಮೀಜಿ ಧರಣಿ ಕುಳಿತು ಇಂದಿಗೆ ನೂರು ದಿನಗಳಾಗಿವೆ. ಆದರೂ ರಾಜ್ಯದ ಮುಖ್ಯಮಂತ್ರಿ ಅವರು ಧರಣಿ ಸ್ಥಳಕ್ಕೆ ಆಗಮಿಸುವ ಸೌಜನ್ಯ ತೋರುತ್ತಿಲ್ಲದಿರುವುದು ಜನಾಂಗದ ತಾಳ್ಮೆ ಕೆಡಿಸಿದೆ. ಈಗಲಾದರೂ ಎಚ್ಚೆತ್ತುಕೊಂಡು ಮೀಸಲಾತಿಯನ್ನು ಕೊಡದಿದ್ದರೆ ಮುಂದೆ ರಾಜ್ಯಾದ್ಯಂತ ಉಗ್ರ ಪ್ರತಿಭಟನೆ ನಡೆಸಲಾಗುವುದೆಂದರು.

ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಎಂ.ಕೆ. ತಾಜ್‌ಪೀರ್ ಮಾತನಾಡುತ್ತ ಶೇ. ೭.೫ ಮೀಸಲಾತಿಗಾಗಿ ಪ್ರಸನ್ನಾನಂದಸ್ವಾಮಿಗಳು ನೂರು ದಿನಗಳಿಂದಲೂ ಧರಣಿ ನಡೆಸುತ್ತಿದ್ದರೂ ಆಡಳಿತ ರೂಢ ರಾಜ್ಯ ಬಿಜೆಪಿ ಸರ್ಕಾರ ಸ್ವಾಮೀಜಿಗಳ ಬಳಿ ಬಂದು ಮಾತನಾಡಬಹುದಿತ್ತು. ಎಲ್.ಜಿ. ಹಾವನೂರ್, ಭೀಮಪ್ಪನಾಯಕ, ಹೋ.ಚಿ. ಬೋರಯ್ಯ, ಇವರುಗಳನ್ನು ಈ ಸಂದರ್ಭದಲ್ಲಿ ಎಸ್ಸಿ, ಎಸ್ಟಿಗಳು ಸ್ಮರಿಸಿಕೊಳ್ಳಲೇಬೇಕು. ನಾಯಕ ಸಮಾಜದ ಶಾಸಕರು, ಸಚಿವರು ತಮ್ಮ ಸ್ಥಾನಗಳಿಗೆ ರಾಜೀನಾಮೆ ನೀಡಿ ಹೊರಬರಬಹುದಿತ್ತು. ಇದ್ಯಾವುದನ್ನು ಮಾಡುತ್ತಿಲ್ಲ. ಸರ್ಕಾರ ಈಗಲಾದರೂ ಕಣ್ತೆರೆದರೆ ಒಳ್ಳೆಯದು ಎಂದು ಹೇಳಿದರು.

ತಾಲೂಕು ನಾಯಕ ಸಮಾಜದ ಅಧ್ಯಕ್ಷ ಬಿ. ಕಾಂತರಾಜ್ ಮಾತನಾಡಿ ಕೇಂದ್ರ ಸರ್ಕಾರ ನಾಯಕ ಜನಾಂಗಕ್ಕೆ ಮೀಸಲಾತಿ ಕೊಟ್ಟಿದೆ. ರಾಜ್ಯ ಸರ್ಕಾರ ಶೇ. ೭.೫ ಮೀಸಲಾತಿ ಕೊಡಲು ಇನ್ನು ಮೀನಾಮೇಷ ಎಣಿಸುತ್ತಿದೆ. ಇದು ಅಷ್ಟು ಸುಲಭವಾಗಿ ಸಿಗುವ ಸರಕಲ್ಲ. ಮೀಸಲಾತಿಗಾಗಿ ವರ್ಷಗಟ್ಟಲೆ ಧರಣಿ ನಡೆಸಲು ನಮ್ಮ ಸ್ವಾಮಿಗಳು ಸಿದ್ದರಿದ್ದಾರೆ. ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದವರು ಶಕ್ತಿಯಾಗಿ ನಿಲ್ಲಬೇಕು.

ನಾಯಕ ಸಮಾಜದ ಶಾಸಕರು, ಸಚಿವರು ತಮ್ಮ ಸ್ಥಾನಗಳಿಗೆ ರಾಜೀನಾಮೆ ನೀಡಿ ಹೊರಬಂದಿದ್ದರೆ ನಾವು ಬೀದಿಗಿಳಿಯುವ ಅಗತ್ಯವಿರುತ್ತಿರಲಿಲ್ಲ. ನಮ್ಮವರ ತಪ್ಪು ಸಾಕಷ್ಟಿದೆ. ಅದಕ್ಕಾಗಿ ಮುಂದೆ ರಾಜ್ಯಾದ್ಯಂತ ಉಗ್ರ ಹೋರಾಟ ನಡೆಸಲು ಎಲ್ಲರೂ ಸಿದ್ದರಿರಬೇಕೆಂದು ಕರೆ ಕೊಟ್ಟರು.

ನಮಗೆ ಯಾರು ನ್ಯಾಯ ಕೊಡುತ್ತಾರೋ ಅಂತಹವರ ಪರವಾಗಿ ನಿಲ್ಲಬೇಕು. ಸರ್ಕಾರ ನಿರ್ಲಕ್ಷೆ ಮಾಡುತ್ತಿರುವುದರಿಂದ ಮುಂದಿನ ಚುನಾವಣೆಯಲ್ಲಿ ಮತದಾನದ ಮೂಲಕ ತಕ್ಕಪಾಠ ಕಲಿಸಬೇಕಾಗುತ್ತದೆ. ಈಗ ನಮಗೆ ಮೀಸಲಾತಿ ಸಿಗದಿದ್ದರೆ ಮುಂದಿನ ಪೀಳಿಗೆ ಕಷ್ಟ ಅನುಭವಿಸಬೇಕಾಗುತ್ತದೆನ್ನುವುದನ್ನು ಎಲ್ಲರೂ ಗಮನದಲ್ಲಿಟ್ಟುಕೊಳ್ಳಬೇಕು ಎಂದರು.

ನಗರಸಭೆ ಸದಸ್ಯ ವೆಂಕಟೇಶ್, ಎಚ್. ಅಂಜಿನಪ್ಪ, ಮದಕರಿನಾಯಕ ವಿದ್ಯಾಸಂಸ್ಥೆಯ ಆಡಳಿತಾಧಿಕಾರಿ ಸಂದೀಪ್, ಕಲ್ಲವ್ವನಾಗತಿಹಳ್ಳಿ ತಿಪ್ಪೇಸ್ವಾಮಿ, ರತ್ನಮ್ಮ ಶ್ರೀನಿವಾಸ ನಾಯಕ ಇವರುಗಳು ಮಾತನಾಡಿದರು.

ನಗರಸಭೆ ಅಧ್ಯಕ್ಷರಾದ ಶ್ರೀಮತಿ ತಿಪ್ಪಮ್ಮ, ಸದಸ್ಯ ದೀಪು, ಅಂಗಡಿ ಮಂಜಣ್ಣ, ಡಿ. ಗೋಪಾಲಸ್ವಾಮಿ ನಾಯಕ, ಜಿಲ್ಲಾ ಪಂಚಾಯತಿ ಮಾಜಿ ಸದಸ್ಯ ಆರ್. ನರಸಿಂಹರಾಜ, ನಗರಸಭೆ ಮಾಜಿ ಸದಸ್ಯರುಗಳಾದ ಸಿ.ಟಿ. ರಾಜೇಶ್, ತಿಪ್ಪೇಸ್ವಾಮಿ, ಎ.ಟಿ. ಎಸ್. ತಿಪ್ಪೇಸ್ವಾಮಿ, ಸಿರಿಗೆರೆ ತಿಪ್ಪೇಶ್, ಕಾಟಿಹಳ್ಳಿ ಕರಿಯಪ್ಪ, ಕಾಂಗ್ರೆಸ್‌ನ ಕೆ.ಪಿ. ಸಂಪತ್‌ಕುಮಾರ್, ನ್ಯಾಯವಾದಿ ಅಶೋಕ್‌ಬೆಳಗಟ್ಟ, ಸರ್ವೆಬೋರಣ್ಣ ಸೇರಿದಂತೆ ನಾಯಕ ಹಾಗೂ ಎಸ್ಸಿ ಸಮುದಾಯದ ಅನೇಕ ಮುಖಂಡರುಗಳು ಪ್ರತಿಭಟನೆಯಲ್ಲಿದ್ದರು.

ಎಣ್ಣೆಕಾಳು ಬಿತ್ತನೆಗೆ ಹೆಚ್ಚಿನ ಪ್ರೋತ್ಸಾಹ : ಜಂಟಿ ಕೃಷಿ ನಿರ್ದೇಶಕ ರಮೇಶ್ ಕುಮಾರ್

ಚಿತ್ರದುರ್ಗ, ಮೇ ೨೦

ತಾಲೂಕಿನಾದ್ಯಂತ ಉತ್ತಮ ಮಳೆಯಾಗಿದೆ. ಜಿಲ್ಲೆಯಲ್ಲಿ ಹೆಚ್ಚು ಶೇಂಗಾ ಬೆಳೆ ಬೆಳೆಯುತ್ತಿದ್ದಾರೆ. ಶೇಂಗಾ ಜೊತೆಗೆ ಸೂರ್ಯಕಾಂತಿ ಸೇರಿದಂತೆ ಇತರೆ ಎಣ್ಣೆ ಕಾಳುಗಳ ಬಿತ್ತನೆಗೆ ಕೃಷಿ ಪರಿಕರ ಮಾರಾಟಗಾರರು ರೈತರಿಗೆ ಹೆಚ್ಚಿನ ಪ್ರೋತ್ಸಾಹ ನೀಡಬೇಕು ಎಂದು ಜಂಟಿ ಕೃಷಿ ನಿರ್ದೇಶಕ ರಮೇಶ್ ಕುಮಾರ್ ಕರೆ ನೀಡಿದರು.

ನಗರದ ಕೃಷಿ ತಂತ್ರಜ್ಞರ ಸಂಸ್ಥೆಯಲ್ಲಿ ಗುರುವಾರ ಕೃಷಿ ಪರಿಕರ ಮಾರಾಟಗಾರರ ಸಭೆ ಮತ್ತು ಸುರಕ್ಷಿತ ಕೀಟನಾಶಕ ಬಳಕೆ ಕುರಿತಾದ ತರಬೇತಿ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಕಳೆದ ವರ್ಷ ಹತ್ತಿ ಹಾಗೂ ಸೂರ್ಯಕಾಂತಿಗೆ ಉತ್ತಮವಾದ ಬೆಲೆ ದೊರೆತಿದೆ. ಈ ವರ್ಷ ತಾಲೂಕಿನಲ್ಲಿ ಹತ್ತಿ ಹಾಗೂ ಸೂರ್ಯಕಾಂತಿ ಬಿತ್ತನೆ ಹೆಚ್ಚಾಗುವ ನಿರೀಕ್ಷೆಯಿದೆ. ತಾಲೂಕಿನಲ್ಲಿ ೧೫೦ ಹೆಕ್ಟರ್ ಹತ್ತಿ ಬಿತ್ತನೆಯಾಗಿದೆ.

ತಾಲೂಕಿಗೆ ಒಟ್ಟು ೩೦,೦೦೦ ಟನ್ ರಸಗೊಬ್ಬರದ ಆವಶ್ಯಕತೆಯಿದೆ. ಪ್ರಸ್ತುತ ೧೫,೦೦೦ ಟನ್ ರಸಗೊಬ್ಬರ ದಾಸ್ತಾನಿದೆ. ತಾಲೂಕಿನಾದ್ಯಂತ ಸುಮಾರು ೨೬ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳು ಹಾಗೂ ೭೯ ಖಾಸಗಿ ಕೃಷಿ ಪರಿಕರ ಮಾರಾಟಗಾರರ ಮೂಲಕ ಸಮರ್ಪಕವಾಗಿ ರಸಗೊಬ್ಬರ ವಿತರಣೆ ಮಾಡಲು ಕ್ರಮ ವಹಿಸಲಾಗಿದೆ ಎಂದರು.

ಕೃಷಿ ಉಪ ನಿರ್ದೇಶಕ ಪ್ರಭಾಕರ ಮಾತನಾಡಿ, ರೈತರಿಗೆ ಸಮರ್ಪಕವಾಗಿ ಬಿತ್ತನೆ ಬೀಜಗಳು ಹಾಗೂ ಗೊಬ್ಬರವನ್ನು ಒದಗಿಸಲು ಕೃಷಿ ಇಲಾಖೆ ಕಾರ್ಯ ನಿರ್ವಹಿಸುತ್ತಿದೆ. ಕೃಷಿ ಪರಿಕರ ಮಾರಾಟಗಾರರು ಅಂಗಡಿಗಳಲ್ಲಿ ನಾಮಫಲಕದಲ್ಲಿ ಉಳಿದಿರುವ ಗೊಬ್ಬರ ಮತ್ತು ಅದರ ಬೆಲೆಯನ್ನು ಸ್ಪಷ್ಟವಾಗಿ ನಮೂದಿಸಬೇಕು.

ರೈತರಿಗೆ ಗುಣಮಟ್ಟವಾದ ಗೊಬ್ಬರ ಮತ್ತು ಬೀಜಗಳನ್ನು ನೀಡಬೇಕು. ಕಳಪೆ ಬೀಜಗಳ ಮಾರಾಟ ಹಾಗೂ ಎಂಆರ್‌ಪಿ ಬೆಲೆಗಿಂತ ಹೆಚ್ಚು ಬೆಲೆಗೆ ಮಾರಾಟ ಕಂಡುಬಂದರೆ ಕಠಿಣ ಕ್ರಮವನ್ನು ಜರುಗಿಸಿ ಅಂಗಡಿಯ ಪರವನಗಿಯನ್ನು ರದ್ದು ಮಾಡಲಾಗುವುದು ಎಂದು ಪ್ರಭಾಕರ ಎಚ್ಚರಿಕೆ ನೀಡಿದರು.

ಸಹಾಯಕ ಕೃಷಿ ನಿರ್ದೇಶಕ ಚಂದ್ರಕುಮಾರ್ ಮಾತನಾಡಿ, ಚಿತ್ರದುರ್ಗ ತಾಲೂಕು ಒಟ್ಟು ೧,೨೩, ೫೦೨ ಹೆಕ್ಟರ್ ಭೌಗೋಳಿಕ ವಿಸ್ತೀರ್ಣ ಹೊಂದಿದೆ. ೮೧,೧೩೦ ಹೆಕ್ಟೇರ್ ಕೃಷಿ ಯೋಗ್ಯ ಸಾಗುವಳಿ ಭೂಮಿಯಿದೆ. ಇದರಲ್ಲಿ ೬೫,೨೩೦ ಹೆಕ್ಟೇರ್ ಪ್ರದೇಶದಲ್ಲಿ ಮುಂಗಾರು ಹಂಗಾಮಿನಲ್ಲಿ ವಿವಿಧ ಕೃಷಿ ಬೆಳೆಗಳನ್ನು ಬೆಳೆಯಲಾಗುತ್ತದೆ.

ತಾಲೂಕಿನಲ್ಲಿ ಪ್ರಮುಖವಾಗಿ ಆಹಾರ ಧಾನ್ಯಗಳಾದ ಮುಸುಕಿನ ಜೋಳ, ರಾಗಿ, ದ್ವಿದಳ ಧಾನ್ಯಗಳಾದ ತೊಗರಿ, ಅವರೆ, ಹಾಗೂ ಎಣ್ಣೆಕಾಳು ಬೆಳೆಗಳಾದ ಶೇಂಗಾ, ಸೂರ್ಯಕಾಂತಿ ಹಾಗೂ ವಾಣಿಜ್ಯ ಬೆಳೆಯಾದ ಹತ್ತಿಯನ್ನು ಹೆಚ್ಚಿನ ಪ್ರದೇಶದಲ್ಲಿ ಬೆಳೆಯಲಾಗುತ್ತದೆ, ತಾಲೂಕಿಗೆ ಒಟ್ಟು ೧೨,೦೦೦ ಕ್ವಿಂಟಾಲ್ ಬಿತ್ತನೆ ಬೀಜದ ಅವಶ್ಯಕತೆ ಇದೆ.

ಕೃಷಿ ಇಲಾಖೆಯಿಂದ ಸಹಾಯಧನ ಯೋಜನೆಯಡಿ ಎಲ್ಲಾ ಹೋಬಳಿ ರೈತ ಸಂಪರ್ಕ ಕೇಂದ್ರಗಳಲ್ಲಿ ಬಿತ್ತನೆ ಬೀಜಗಳಾದ ಹೈಬ್ರಿಡ್ ಜೋಳ, ಮುಸುಕಿನ ಜೋಳ, ಅಲಸಂದೆ, ಹೆಸರು ತೊಗರಿ ಹಾಗೂ ಶೇಂಗಾ ದಾಸ್ತಾನು ಮಾಡಿ ಸಮರ್ಪಕವಾಗಿ ವಿತರಣೆ ಮಾಡಲಾಗುತ್ತದೆ ಎಂದು ತಿಳಿಸಿದರು.

ಜಾಗೃತದಳದ ಸಹಾಯಕ ಕೃಷಿ ನಿರ್ದೇಶಕ ಲೋಕೇಶ್ವರಪ್ಪ ಮಾತನಾಡಿ, ಗ್ರಾಮೀಣ ಪ್ರದೇಶದಲ್ಲಿ ಪರವಾನಗಿ ಇಲ್ಲದೆ ಬೀಜ-ಗೊಬ್ಬರ ಔಷಧಿಗಳನ್ನು ಮಾರಾಟ ಮಾಡುತ್ತಿರುವವರ ವಿರುದ್ಧವಾಗಿ ಅರ್ಜಿಗಳು ಬಂದಿವೆ. ಅಂಥವರ ವಿರುದ್ಧ ಕೇಸ್ ದಾಖಲಾಗುವುದು.

ರೈತರಿಗೆ ಬಿತ್ತನೆ ಬೀಜಗಳು, ಔಷಧಿಗಳನ್ನು ನೀಡುವ ಸಂದರ್ಭದಲ್ಲಿ ಯಾವ ಪ್ರಮಾಣದಲ್ಲಿ ಬಳಸಬೇಕು ಎಂಬುದರ ಬಗ್ಗೆ ಮಾಹಿತಿಯನ್ನು ನೀಡಬೇಕು. ಕೀಟನಾಶಕ ಔಷಧಿ ಮತ್ತು ಗೊಬ್ಬರ ಬೀಜಗಳಿಗೆ ಪ್ರತ್ಯೇಕ ಬಿಲ್ ನೀಡಬೇಕು ಎಂದರು.

ಐಎಫ್‌ಎಫ್‌ಸಿಒ ಸಂಸ್ಥೆಯ ಅಧಿಕಾರಿ ಚಿದಾನಂದಮೂರ್ತಿ ಮಾತನಾಡಿ, ರೈತರು ನ್ಯಾನೋ ಡಿಎಪಿ ಗೊಬ್ಬರ ಬಳಸುವುದರಿಂದ ಹೆಚ್ಚು ಅನುಕೂಲವಾಗುತ್ತದೆ. ಜೊತೆಗೆ ಹಣ ಉಳಿತಾಯವಾಗುತ್ತದೆ. ಇದರ ಬಳಕೆಯ ವಿಧಾನವನ್ನು ತಿಳಿದುಕೊಳ್ಳಬೇಕೆಂದು ತಿಳಿಸಿದರು.

ಈ ಸಂದರ್ಭದಲ್ಲಿ ಕೃಷಿ ಪರಿಕರಗಳ ಮಾರಾಟಗಾರರ ಸಂಘದ ಅಧ್ಯಕ್ಷ ರೇವಣಸಿದ್ದಪ್ಪ ರೈತ ಮುಖಂಡ ಸುರೇಶ್ ಬಾಬು ಸೇರಿದಂತೆ ಬಿತ್ತನೆ ಬೀಜ ತಯಾರಿಕಾ ಸಂಸ್ಥೆಗಳ ಪ್ರತಿನಿಧಿಗಳು ಇದ್ದರು.

ಮಳೆಗೆ, ಮನೆಗಳು – ಕೃಷಿಬೆಳೆ ತೋಟಗಾರಿಕೆ ಬೆಳೆ ಹಾನಿ

ಚಿತ್ರದುರ್ಗ, ಮೇ ೨೦

ಮೇ ೧೯ ರಂದು ಜಿಲ್ಲೆಯಾದ್ಯಂತ ಸರಾಸರಿ ೧೫ ಮಿ.ಮೀ., ಮಳೆಯಾಗಿದೆ. ಚಿತ್ರದುರ್ಗ ತಾಲೂಕಿನಲ್ಲಿ ೨೪.೧ ಮಿ.ಮೀ., ಮೊಳಕಾಲ್ಮುರಿನಲ್ಲಿ ೨೧.೪ ಮಿ.ಮೀ., ಹೊಳಲ್ಕೆರೆ ೧೮.೪ ಮಿ.ಮೀ., ಚಳ್ಳಕೆರೆಯಲ್ಲಿ ೧೧.೬ ಮಿ.ಮೀ., ಹೊಸದುರ್ಗದಲ್ಲಿ ೧೦ ಮಿ.ಮೀ., ಹಿರಿಯೂರಿನಲ್ಲಿ ೪.೩ ಮಿ.ಮೀ., ಮಳೆಯಾಗಿದೆ. ಜಿಲ್ಲೆಯಲ್ಲಿ ಮಳೆಗೆ ೪೬ ಮನ

ಇಂಧನ ಬೆಲೆಗಳ ಬಗ್ಗೆ ಪ್ರತಿಪಕ್ಷಗಳ ಕಥನದ ಬೂಟಾಟಿಕೆ

೨೦೨೦ರ ಪ್ರಾರಂಭದಿಂದಲೂ, ವಿಶ್ವದಾದ್ಯಂತದ ಸರಕಾರಗಳು ಕೋವಿಡ್-೧೯ ಸಾಂಕ್ರಾಮಿಕ ರೋಗದ ಕಬಂಧಬಾಹುವಿಗೆ ಸಿಲುಕಿದ್ದು, ವಿಕಸನಗೊಳ್ಳುತ್ತಿರುವ ಹೊಸ ವಿಶ್ವ ವ್ಯವಸ್ಥೆಗೆ ಹೊಂದಿಕೊಳ್ಳಲು ಹೆಣಗಾಡುತ್ತಿವೆ.

ಇಂತಹ ಸನ್ನಿವೇಶದಲ್ಲೂ ಭಾರತವು ಅತ್ಯಂತ ಸ್ಥಿತಿಸ್ಥಾಪಕ ದೇಶವಾಗಿ ಹೊರಹೊಮ್ಮಿದೆ. ೨೦೨೨ರ ಕ್ಯಾಲೆಂಡರ್ ವರ್ಷದಲ್ಲಿ ಜಾಗತಿಕವಾಗಿ ದಾಖಲಾದ ಅಭಿವೃದ್ಧಿ ದರ ೩.೬%ಕ್ಕೆ ಹೋಲಿಸಿದರೆ, ೨೦೨೨-೨೩ನೇ ಸಾಲಿನಲ್ಲಿ ಭಾರತವು ೮.೨% ಅಭಿವೃದ್ಧಿ ದರದ ಮೂಲಕ ವಿಶ್ವದ ಅತ್ಯಂತ ವೇಗವಾಗಿ ಬೆಳೆಯುತ್ತಿರುವ ಪ್ರಮುಖ ಆರ್ಥಿಕತೆಯಾಗಿ ಹೊರಹೊಮ್ಮಲಿದೆ ಎಂಬ ಐಎಂಎಫ್‌ನ ಮುನ್ನೋಟದಲ್ಲಿ ಈ ಅಂಶವು ಪ್ರತಿಬಿಂಬಿತವಾಗಿದೆ.

ಸಾಂಕ್ರಾಮಿಕ ರೋಗವು ಒಡ್ಡಿದ ಸಾಮಾಜಿಕ-ಆರ್ಥಿಕ ಸಮಸ್ಯೆಗಳನ್ನು ಮೋದಿ ಸರಕಾರದ ದೂರದೃಷ್ಟಿಯ ಉಪಕ್ರಮಗಳಿಂದಾಗಿ ಭಾರತವು ಅವಕಾಶವಾಗಿ ಪರಿವರ್ತಿಸಲು ಸಾಧ್ಯವಾಗಿದೆ. ಅಭೂತಪೂರ್ವ ೨೦ ಲಕ್ಷ ಕೋಟಿ ರೂ.ಗಳ **ಆತ್ಮನಿರ್ಭರ ಭಾರತ ಪ್ಯಾಕೇಜ್**ನಂತಹ ಮಧ್ಯಸ್ಥಿಕೆಗಳು ರಾಷ್ಟ್ರವು ಸುಸ್ಥಿರ ಮತ್ತು ಅಂತರ್ಗತ ಆರ್ಥಿಕ ಚೇತರಿಕೆಯನ್ನು ಖಚಿತಪಡಿಸಿವೆ. ಭಾರತ ಸರಕಾರವು ೮೦ ಕೋಟಿ ಭಾರತೀಯ ನಾಗರಿಕರಿಗೆ ಉಚಿತ ಪಡಿತರ ಪೂರೈಕೆಯನ್ನು ಮುಂದುವರಿಸಿದೆ. ೧೮೮ ಕೋಟಿ ಲಸಿಕೆಗಳನ್ನು ನೀಡಿದೆ. (ಈ ಲೇಖನ ಬರೆಯುವ ಸಮಯದಲ್ಲಿ) ಮತ್ತು ಆರ್ಥಿಕತೆಯ ಪ್ರಮುಖ ವಲಯಗಳ ಪುನಶ್ಚೇತನಕ್ಕಾಗಿ "**ರಾಷ್ಟ್ರೀಯ ಮೂಲಸೌಕರ್ಯ ಯೋಜನೆ**"ಯಲ್ಲಿ (ಎನ್‌ಐಪಿ) ೧೧೧ ಲಕ್ಷ ಕೋಟಿ ರೂ.ಗಳನ್ನು ಹೂಡಿಕೆ ಮಾಡಲು ಬದ್ಧವಾಗಿದೆ. ಕಡಿತಗೊಂಡ ಆದಾಯ ಮತ್ತು ರಾಜ್ಯ ಸರಕಾರಗಳಿಗೆ ನೀಡಿದ ಗಮನಾರ್ಹ ನೆರವಿನ ಹೊರತಾಗಿಯೂ ಈ ಸಾಧನೆ ಮಾಡಿರುವುದು ಮೋದಿ ಸರಕಾರದ ಆದ್ಯತೆಗಳ ಮಟ್ಟವನ್ನು ತೋರಿಸುತ್ತದೆ.

ಸಾಂಕ್ರಾಮಿಕ ರೋಗ ಇಳಿಮುಖವಾದಾಗಿನಿಂದಲೂ ಕಚ್ಚಾತೈಲ ದರಗಳಲ್ಲಿ ೫೦೦% ಹೆಚ್ಚಳವಾಗಿದೆ ಮತ್ತು ಉಕ್ರೇನ್‌ನಲ್ಲಿ ಮಿಲಿಟರಿ ಕಾರ್ಯಾಚರಣೆಯಿಂದಾಗಿ ಅಸ್ಥಿರತೆ ತಲೆದೋರಿದೆ. ಇದರ ಹೊರತಾಗಿಯೂ ಜವಾಬ್ದಾರಿಯುತ ಆಡಳಿತ ಮತ್ತು ಸಹಕಾರಿ ಒಕ್ಕೂಟ ವ್ಯವಸ್ಥೆಯ ನೀತಿಗಳಿಗೆ ಕೇಂದ್ರ ಸರಕಾರ ಬದ್ಧವಾಗಿದ್ದು, ರಾಜ್ಯ ಸರಕಾರಗಳಿಗೆ ಒದಗಿಸಲಾದ ಆರ್ಥಿಕ ಬೆಂಬಲದ ಪ್ರಮಾಣವು ಇದನ್ನು ಸೂಚಿಸುತ್ತದೆ. ಭಾರತವು ತನ್ನ ಪೆಟ್ರೋಲಿಯಂ ಅಗತ್ಯಗಳಲ್ಲಿ ಸುಮಾರು ೮೫% ಅನ್ನು ಆಮದು ಮಾಡಿಕೊಳ್ಳುವ ಹಿನ್ನೆಲೆಯಲ್ಲಿ, ಈ ಎಲ್ಲಾ ಅಂಶಗಳು ದೇಶದ ಮೇಲೆ ಹೊರೆಯನ್ನು ಸಾಕಷ್ಟು ಹೆಚ್ಚಿಸಿವೆ.

ವಿದೇಶಿ ಅವಲಂಬನೆಯನ್ನು ಸರಿದೂಗಿಸಲು ಭಾರತವು ತನ್ನ ನವೀಕರಿಸಬಹುದಾದ ಇಂಧನ ಸಾಮರ್ಥ್ಯಗಳನ್ನು ತ್ವರಿತವಾಗಿ ಹೆಚ್ಚಿಸುತ್ತಿದೆಯಾದರೂ, ಪ್ರತಿದಿನ ೦೬ ಕೋಟಿಗೂ ಹೆಚ್ಚು ನಾಗರಿಕರು ಚಿಲ್ಲರೆ ಮಾರಾಟ ಮಳಿಗೆಗಳಲ್ಲಿ ಪೆಟ್ರೋಲಿಯಂ ಉತ್ಪನ್ನಗಳನ್ನು ಖರೀದಿಸುತ್ತಾರೆ ಎಂಬುದನ್ನು ಗುರುತಿಸಬೇಕು. ದೇಶದ ಆರ್ಥಿಕ ಬೆಳವಣಿಗೆಯ ವೇಗ ಹೆಚ್ಚುತ್ತಿರುವುದರಿಂದ ಮತ್ತು ಇಂಧನ ಬಳಕೆಯು ಸಹ ಹೆಚ್ಚುತ್ತಿರುವುದರಿಂದ ಇಂಧನದ ತಲಾ ಬೇಡಿಕೆಯು ಇನ್ನೂ ಹೆಚ್ಚುತ್ತಲೇ ಸಾಗುತ್ತದೆ. ಭಾರತವು ಹಸಿರು ಆರ್ಥಿಕತೆಗೆ ಪರಿವರ್ತನೆಯಾಗುವವರೆಗೂ ಇದೇ ಸ್ಥಿತಿ ಮುಂದುವರಿಯಲಿದೆ. ಈ ಹಿನ್ನೆಲೆಯಲ್ಲಿ ಇದರ ಹೊರೆಯನ್ನು ದೇಶದ ಗ್ರಾಹಕರಿಗೆ ವರ್ಗಾಯಿಸುವುದನ್ನು ಕಡಿಮೆ ಮಾಡುವ ನಿಟ್ಟಿನಲ್ಲಿ ಕೇಂದ್ರ ಸರಕಾರ ಕ್ರಮ ಕೈಗೊಂಡಿದೆಯಾದರೂ, ರಾಜ್ಯ ಸರಕಾರಗಳು ತಮ್ಮ ಪರಧಿಯಲ್ಲಿ ಇದೇ ಹಾದಿ ಅನುಸರಿಸುತ್ತಿವೆಯೇ ಎಂಬುದನ್ನು ಪರಿಗಣಿಸಬೇಕಿದೆ.

ಮೋದಿ ಸರಕಾರವು ತನ್ನ ಉಸ್ತುವಾರಿಯಲ್ಲಿ ಪೆಟ್ರೋಲ್ ದರ ಏರಿಕೆಯನ್ನು ಸಾಧ್ಯವಾದಷ್ಟು ಕಡಿಮೆ ಇರುವಂತೆ ನೋಡಿಕೊಂಡಿದೆ. ಏಪ್ರಿಲ್ ೨೦೨೧ ಮತ್ತು ಏಪ್ರಿಲ್ ೨೦೨೨ರ ನಡುವೆ, ಭಾರತದಲ್ಲಿ ಪೆಟ್ರೋಲ್ ದರ ಏರಿಕೆಯು ಅಮೆರಿಕ (೫೦.೬%), ಕೆನಡಾ (೫೦.೭%), ಜರ್ಮನಿ (೫೦%), ಬ್ರಿಟನ್ (೫೮.೯%) ಮತ್ತು ಫ್ರಾನ್ಸ್ (೩೩%) ಬಳಿಕ ಅತ್ಯಂತ ಕಡಿಮೆ ಎನಿಸಿದೆ. ಡೀಸೆಲ್ ದರ ಏರಿಕೆಯಲ್ಲಿ ಇದೇ ರೀತಿಯ ವ್ಯತ್ಯಾಸಗಳನ್ನು ಗಮನಿಸಬಹುದು. ಇಂಧನ ದರ ಏರಿಕೆಯು ಅತ್ಯಂತ ಕಡಿಮೆ ಮಟ್ಟದಲ್ಲಿರುವ ಪ್ರಮುಖ ರಾಷ್ಟ್ರಗಳಲ್ಲೂ ಭಾರತ ಸ್ಥಾನ ಪಡೆದಿದೆ.

ದೇಶೀಯ ಬೆಲೆ ಏರಿಕೆಯ ಐತಿಹಾಸಿಕ ವಿಶ್ಲೇಷಣೆ ಮಾಡುವುದಾದರೆ, ೨೦೧೪-೨೦೨೨ರ ಅವಧಿಯಲ್ಲಿ ದಾಖಲಾದ ೩೬% ನಷ್ಟು ಪೆಟ್ರೋಲ್ ದರ ಏರಿಕೆಯು (ಲೀಟರ್‌ಗೆ ೭೭ ರೂ.ಗಳಿಂದ ೧೦೫ ರೂ.ಗಳು) ಕಳೆದ ೪೨ ವರ್ಷಗಳ ತುಲನಾತ್ಮಕ ಅವಧಿಯಲ್ಲಿ ಅತ್ಯಂತ ಕಡಿಮೆಯಾಗಿರುವುದು ಕಂಡುಬರುತ್ತದೆ. ೨೦೦೭-೧೪ ರಲ್ಲಿ ೬೦% (೪೮ ರೂ.ನಿಂದ ೭೭ ರೂ.ಗಳು), ೨೦೦೦-೨೦೦೭ರ ಅವಧಿಯಲ್ಲಿ ೭೦% (೨೮ ರೂ. ನಿಂದ ೪೮ ರೂ.), ೧೯೯೩-೨೦೦೦ರ ಅವಧಿಯಲ್ಲಿ ಶೇ. ೫೫ ರಷ್ಟು (೧೮ ರೂ. ನಿಂದ ೨೮ ರೂ.), ೧೯೮೬-೧೯೯೩ರ ಅವಧಿಯಲ್ಲಿ ೧೨೫% (೦೮ ರೂ. ನಿಂದ ೧೮ ರೂ.), ೧೯೭೯-೧೯೮೬ರ ಅವಧಿಯಲ್ಲಿ ೧೨೨% (೩.೬ ರೂ.ನಿಂದ ೦೮ ರೂ.) ಮತ್ತು ೧೯೭೩-೭೯ರ ಅವಧಿಯಲ್ಲಿ ೧೪೦% (೧.೨೫ ರೂ. ರಿಂದ ರೂ. ೦೩).

ಇಲ್ಲಿ ನೆನಪಿನಲ್ಲಿಡಬೇಕಾದ ಬಹು ಮುಖ್ಯ ವಿಷಯವೆಂದರೆ, ೨೦೧೦ರಲ್ಲಿ ಪೆಟ್ರೋಲ್ ಮತ್ತು ೨೦೧೪ ರಲ್ಲಿ ಡೀಸೆಲ್ ಬೆಲೆಗಳನ್ನು ನಿಯಂತ್ರಣ ಮುಕ್ತಗೊಳಿಸಲಾಗಿದೆ. ಅಂದಿನಿಂದ ಅವು ಮಾರುಕಟ್ಟೆ-ಚಾಲಿತವಾಗಿವೆ. ಸಾಂಕ್ರಾಮಿಕ ರೋಗದಿಂದ ಉಂಟಾದ ಆದಾಯ ಕೊರತೆಗಳ ಹೊರತಾಗಿಯೂ, ಮೋದಿ ಸರಕಾರವು ೨೦೨೧ರ ನವೆಂಬರ್‌ನಲ್ಲಿ ಪೆಟ್ರೋಲ್ ಮೇಲಿನ ಅಬಕಾರಿ ಸುಂಕವನ್ನು ಲೀಟರ್‌ಗೆ ೦೫ ರೂ. ಮತ್ತು ಡೀಸೆಲ್ ಮೇಲೆ ಲೀಟರ್‌ಗೆ ೧೦ ರೂ.ಕಡಿಮೆ ಮಾಡಿದೆ.

ಮೌಲ್ಯವರ್ಧಿತ ತೆರಿಗೆಯನ್ನು (ವ್ಯಾಟ್) ಕಡಿತಗೊಳಿಸುವ ಕ್ರಮವನ್ನು ಹೆಚ್ಚಿನ ರಾಜ್ಯ ಸರಕಾರಗಳು ಅನುಸರಿಸುತ್ತಿದ್ದರೂ, ಕಾಂಗ್ರೆಸ್-ಮಿತ್ರ ರಾಜ್ಯಗಳಾದ ಮಹಾರಾಷ್ಟ್ರ, ತಮಿಳುನಾಡು ಮತ್ತು ಜಾರ್ಖಂಡ್ ರಾಜ್ಯಗಳು ಅತಿಯಾದ ಅಬಕಾರಿ ಸುಂಕಗಳನ್ನು ವಿಧಿಸುವುದನ್ನು ಮುಂದುವರಿಸಿವೆ. ಬೆಲೆ ಏರಿಕೆಯ ವಿರುದ್ಧ ಪ್ರತಿಭಟಿಸುತ್ತಿರುವ ಅದೇ ವಿರೋಧ ಪಕ್ಷವು ಭಾರತದಾದ್ಯಂತ ಇಂಧನದ ಮೇಲೆ ಅತ್ಯಧಿಕ ವ್ಯಾಟ್ ವಿಧಿಸಲು ನಿರ್ಧರಿಸಿರುವುದು ಅತ್ಯಂತ ತಮಾಷೆಯಾಗಿದೆ. ಕೆಳಗೆ ಉಲ್ಲೇಖಿಸಲಾದ ಅಂಕಿಅಂಶಗಳು ಈ ಅಸಮಾನತೆಯನ್ನು ಸ್ಪಷ್ಟಪಡಿಸುತ್ತವೆ:

ಮಹಾರಾಷ್ಟ್ರ ೨೬% + ಪ್ರತಿ ಲೀಟರ್‌ಗೆ ೧೦.೧೨ ರೂ.
ರಾಜಸ್ಥಾನ ೩೧% + ಪ್ರತಿ ಲೀಟರ್‌ಗೆ ೧.೫ ರೂ.
ಕೇರಳ ೩೦% + ಪ್ರತಿ ಲೀಟರ್‌ಗೆ ೦೧ ರೂ.
ಆಂಧ್ರ ಪ್ರದೇಶ ೩೧% + ಪ್ರತಿ ಲೀಟರ್‌ಗೆ ೦೫ ರೂ.
ತೆಲಂಗಾಣ ೩೫%
ಪಶ್ಚಿಮ ಬಂಗಾಳ ೨೫% + ಪ್ರತಿ ಲೀಟರ್‌ಗೆ ೧೩ ರೂ.

ಮುಖ್ಯಮಂತ್ರಿಗಳ ಜೊತೆಗೆ ನಡೆದ ಇತ್ತೀಚಿನ ಸಭೆಯಲ್ಲಿ ಪ್ರಧಾನ ಮಂತ್ರಿಯವರು ಉಲ್ಲೇಖಿಸಿದಂತೆ, ಅನೇಕ ವಿರೋಧ ಪಕ್ಷಗಳ ಆಡಳಿತವಿರುವ ರಾಜ್ಯಗಳು ಪೆಟ್ರೋಲ್ ಮೇಲೆ ವಿಧಿಸಿರುವ ತೆರಿಗೆ ಮೂಲಗಳಿಂದ ಕೆಲವು ಬಿಜೆಪಿ ಆಡಳಿತದ ರಾಜ್ಯಗಳಿಗಿಂತ ಎರಡು ಪಟ್ಟು ಹೆಚ್ಚು ಆದಾಯವನ್ನು ಗಳಿಸುತ್ತವೆ.

ಇತರ ಪ್ರಮುಖ ಪೆಟ್ರೋಲಿಯಂ ಉತ್ಪನ್ನಗಳಾದ "**ಏವಿಯೇಷನ್ ಟರ್ಬೈನ್ ಫ್ಯೂಯಲ್**" (ಎಟಿಎಫ್) ಮೇಲೆ ಮಹಾರಾಷ್ಟ್ರ ಮತ್ತು ದೆಹಲಿ ೨೫% ವ್ಯಾಟ್ ವಿಧಿಸುವುದನ್ನು ಮುಂದುವರಿಸಿದರೆ, ಬಿಜೆಪಿ ಆಡಳಿತವಿರುವ ಗುಜರಾತ್ನ ಅಹಮದಾಬಾದ್ನಲ್ಲಿ ಇದರ ಮೇಲಿನ ವ್ಯಾಟ್ ೦೫% ರಷ್ಟು ಕಡಿಮೆಯಾಗಿದೆ. ಇದು ವಿಮಾನ ಪ್ರಯಾಣಿಕರ ಮೇಲಿನ ಹೊರೆಯನ್ನು ಕಡಿಮೆ ಮಾಡಿದೆ. ಈ ರೀತಿ ಇಂಧನ ಅಧಿಕ ತೆರಿಗೆ ಮೂಲಕ ಹೊರೆಯನ್ನು ಗ್ರಾಹಕರಿಗೆ ವರ್ಗಾಯಿಸುವುದರಿಂದ ವಿಮಾನ ಪ್ರಯಾಣಿಕರಿಗೆ ಅನಾನುಕೂಲವಾಗುತ್ತಿದೆ. ಏಕೆಂದರೆ, ವಿಮಾನಯಾನ ನಿರ್ವಹಣಾ ವೆಚ್ಚದ ಶೇ. ೪೦ ರಷ್ಟು ಪಾಲು ಇಂಧನದ್ದೇ (ಎಟಿಎಫ್) ಇರುತ್ತದೆ.

ವಿಪರ್ಯಾಸವೆಂದರೆ, ಈ ರಾಜ್ಯಗಳ ಪೈಕಿ ಅನೇಕವು ಮದ್ಯದ ಮೇಲಿನ ತಮ್ಮ ತೆರಿಗೆಗಳನ್ನು ಕಡಿತಗೊಳಿಸುವಲ್ಲಿ ಕಿಂಚಿತ್ತೂ ಸಮಯ ವ್ಯರ್ಥ ಮಾಡಲಿಲ್ಲ. ನವೆಂಬರ್ ೨೦೨೧ ರಲ್ಲಿ, ಮಹಾರಾಷ್ಟ್ರ ಸರಕಾರವು ಆಮದು ಮದ್ಯದ ಮೇಲಿನ ಅಬಕಾರಿ ಸುಂಕವನ್ನು ಶೇ. ೩೦೦ ರಿಂದ ಶೇ. ೧೫೦ಕ್ಕೆ ಇಳಿಸಿತು. ಅದೇ ತಿಂಗಳಲ್ಲಿ, ಆಂಧ್ರಪ್ರದೇಶ ಸರಕಾರವು ಮದ್ಯದ ಮೇಲೆ ವಿಧಿಸಲಾಗುತ್ತಿದ್ದ ೧೩೦%-೧೯೦% ವ್ಯಾಟ್ ಅನ್ನು ೩೫%-೬೦% ಮಟ್ಟಕ್ಕೆ ಇಳಿಸಿತು. ಇದಕ್ಕೂ ಮೊದಲು, ಏಪ್ರಿಲ್ ೨೦೨೧ ರಲ್ಲಿ, ರಾಜಸ್ಥಾನ ಸರಕಾರವು ಬಿಯರ್ ಮೇಲಿನ ಹೆಚ್ಚುವರಿ ಅಬಕಾರಿ ಸುಂಕವನ್ನು ೩೪% ರಿಂದ ೩೧%ಕ್ಕೆ ಇಳಿಸಿತು.

೨೦೦೫-೧೨ರ ನಡುವೆ ೧.೪೪ ಲಕ್ಷ ಕೋಟಿ ರೂ. ಮೌಲ್ಯದ ದೀರ್ಘಕಾಲೀನ ತೈಲ ಬಾಂಡಡ್‌ಗಳ್ನು ಯುಪಿಎ ಸರಕಾರದ ಅವಧಿಯಲ್ಲಿಯೇ ಬಿಡುಗಡೆ ಮಾಡಲಾಯಿತು ಎಂಬುದನ್ನು ಪ್ರತಿಪಕ್ಷಗಳು ನೆನಪಿನಲ್ಲಿಟ್ಟುಕೊಳ್ಳುವುದು ಒಳ್ಳೆಯದು. ಪ್ರಸ್ತುತ ಭಾರತ ಸರಕಾರವು "**ಯುಪಿಎ**" ಅವಧಿಯ ಈ ತೈಲ ಬಾಂಡ್‌ಗಳ ೩.೨ ಲಕ್ಷ ಕೋಟಿ ರೂ.ಗಳ ಹೊರೆಯನ್ನು ಹೊತ್ತುಕೊಂಡಿದೆ. ಯುಪಿಎ ಸರಕಾರವು ಎಕರೆಗೆ ಪರವಾನಗಿ ನೀಡುವುದನ್ನು ನಿಲ್ಲಿಸಿತು, ಇದರಿಂದಾಗಿ ತೈಲ ಸಂಶೋಧನೆ & ಉತ್ಪಾದನೆ ಸ್ಥಗಿತಗೊಂಡಿತು. ಪ್ರತಿಪಕ್ಷಗಳು ತಮ್ಮ ಅಧಿಕಾರಾವಧಿಯಲ್ಲಿ ಹಲವಾರು ವರ್ಷಗಳ ಕಾಲ ಅಗಾಧ ವೈಫಲ್ಯಗಳ ಮೂಲಕ ಭಾರತದ ಇಂಧನ ಭದ್ರತೆಗೆ ಹಾನಿಯುಂಟುಮಾಡಿದ ನಂತರ ಬೆಲೆ ಏರಿಕೆಯ ಬಗ್ಗೆ ಹುಯಿಲೆಬ್ಬಿಸುತ್ತಿವೆ. ಇದಕ್ಕಿಂತಲೂ ಖೇದಕರ ಸಂಗತಿಯೆಂದರೆ, ವಿರೋಧ ಪಕ್ಷಗಳ ಸುಳ್ಳುಗಳನ್ನು ಬೆತ್ತಲಾಗಿಸಬೇಕಿದ್ದ ಭಾರತೀಯ ಮಾಧ್ಯಮಗಳು ಈ ಪ್ರದರ್ಶಿತ ಸುಳ್ಳುಗಳು ಮತ್ತು ಕಟ್ಟು ಕತೆಗಳ ನಿರೂಪಣೆಗಳಿಗೆ ಕಿವಿಗೊಟ್ಟಿವೆ.

ಯಾರೇ ಆದರೂ ರಾಷ್ಟ್ರ ನಿರ್ಮಾಣದ ಸಾಮೂಹಿಕ ಧ್ಯೇಯದಲ್ಲಿ ಪರಸ್ಪರ ಹೊಂದಾಣಿಕೆ ನಿರೀಕ್ಷಿಸಲಾಗುತ್ತದೆ. ಭಾರತ ಸರಕಾರವು ನೇರ ಮತ್ತು ಪರೋಕ್ಷ ಕ್ರಮಗಳೆರಡರ ಮೂಲಕವೂ ರಾಜ್ಯ ಸರಕಾರಗಳನ್ನು ಬೆಂಬಲಿಸಿದೆ. ಹಣಕಾಸು ಆಯೋಗದ ಅನುದಾನಗಳ ಅಡಿಯಲ್ಲಿ ತೆರಿಗೆ ಆದಾಯದಲ್ಲಿ ೪೨% ಹೆಚ್ಚಿನ ಪಾಲು ನೀಡುವುದು ಮತ್ತು ವಿಕೇಂದ್ರೀಕರಣದ ನಂತರದ ಆದಾಯ ಕೊರತೆ ಅನುದಾನದ ಹೆಚ್ಚಳ ಹಾಗೂ ಜಿಎಸ್ಟಿ ಸಂಗ್ರಹಣೆಯಲ್ಲಿ ಹೆಚ್ಚಿನ ಪಾಲು ಸೇರಿದಂತೆ ಹಲವು ಈ ಸಾಲಿನಲ್ಲಿವೆ. ಇತ್ತೀಚಿನ ಆಯವ್ಯಯದ ಅಡಿಯಲ್ಲಿ ರಾಜ್ಯ ಸರ್ಕಾರಗಳಿಗೆ ೧೧ ಲಕ್ಷ ಕೋಟಿ ರೂ.ಗಳಿಗೂ ಹೆಚ್ಚು ಬಡ್ಡಿರಹಿತ ಸಾಲಗಳನ್ನು ಮೀಸಲಿರಿಸಲಾಗಿದೆ. ಇದು "**ರಾಜ್ಯ ಅಭಿವೃದ್ಧಿ ಸಾಲಗಳ**" (ಎಸ್ಡಿಎಲ್) ಮೂಲಕ ರಾಜ್ಯ ಸರಕಾರಗಳ ಸಾಲಗಳನ್ನು ಕಡಿಮೆ ಮಾಡುತ್ತದೆ. ಅಲ್ಲದೆ, "**ವೇಸ್ ಅಂಡ್ ಮೀನ್ಸ್ ಅಡ್ವಾನ್ಸ್**" (ಡಬ್ಲ್ಯುಎಂಎ) ಮತ್ತು "**ವಿಶೇಷ ಡ್ರಾಯಿಂಗ್ ಫೆಸಿಲಿಟಿ**" (ಎಸ್ಡಿಎಫ್) ಸಾಲಗಳನ್ನು ರಾಜ್ಯ ಸರಕಾರಗಳು ಕನಿಷ್ಠ ದರದಲ್ಲಿ ಪಡೆಯಲು ಅವಕಾಶ ಕಲ್ಪಿಸಲಾಗಿದೆ. ರಾಜ್ಯ ಸರಕಾರಗಳು ಕಳೆದ ಎಂಟು ವರ್ಷಗಳಲ್ಲಿ ಇಂಧನ ತೆರಿಗೆಯಾಗಿ ೧೫.೧೬ ಲಕ್ಷ ಕೋಟಿ ರೂ.ಗಳನ್ನು ಸಂಗ್ರಹಿಸಿವೆ.

ಇಷ್ಟೆಲ್ಲಾ ಮಾಡಿದರೂ, ಈ ರಾಜ್ಯ ಸರಕಾರಗಳು ಗ್ರಾಹಕರಿಗೆ ಪರಿಹಾರವನ್ನು ಒದಗಿಸುವ ನಿಟ್ಟಿನಲ್ಲಿ ತಮ್ಮ ಕೈಲಾದಷ್ಟು ಪ್ರಯತ್ನ ಮಾಡದಿರುವುದನ್ನು ನೋಡಿ ಅಚ್ಚರಿಯಾಗುತ್ತದೆ. ಒಂದೆಡೆ, ಕಾಂಗ್ರೆಸ್ ನೇತೃತ್ವದ ಪ್ರತಿಪಕ್ಷಗಳು ಇಂಧನ ದರಗಳ ಬಗ್ಗೆ ಸುಳ್ಳು ಕಥೆಗಳನ್ನು ಹರಡುತ್ತಿವೆ. ಮತ್ತೊಂದೆಡೆ, ಪೆಟ್ರೋಲ್ ಮತ್ತು ಡೀಸೆಲ್ ಮೇಲಿನ ಅಬಕಾರಿ ಸುಂಕವನ್ನು ಕಡಿಮೆ ಮಾಡುವ ಮೂಲಕ ತಮ್ಮ ರಾಜ್ಯಗಳ ಗ್ರಾಹಕರಿಗೆ ಅನುಕೂಲ ಒದಗಿಸಲು ನಿರಾಕರಿಸುತ್ತಿವೆ. ಈ ಕೃತ್ಯಗಳು ಬೂಟಾಟಿಕೆಯಿಂದ ಕೂಡಿವೆ ಮತ್ತು ದಾರಿತಪ್ಪಿಸುವಂಥವು.

ತೈಲ ಮತ್ತು ಅನಿಲ ವಲಯದಲ್ಲಿನ ಸವಾಲುಗಳ ಬಗ್ಗೆ ಹಾಲಿ ಸರಕಾರವು ಜಾಗೃತವಾಗಿದೆ ಮತ್ತು ದೇಶೀಯ ಸಾಮರ್ಥ್ಯಗಳನ್ನು ಹೆಚ್ಚಿಸಲು ಮಾಹಿತಿಯುಕ್ತ ನಿರ್ಧಾರಗಳನ್ನು ಕೈಗೊಳ್ಳುತ್ತಿದೆ. ನಾವು ಈ ವಿಷಯದ ಬಗ್ಗೆ ಸಮಗ್ರ ದೃಷ್ಟಿಕೋನವನ್ನು ಮುಂದುವರಿಸುತ್ತೇವೆ. ಭಾರತದ ನಾಗರಿಕರಿಗೆ ದೃಷ್ಟಿಕೋನದ ಸ್ಪಷ್ಟತೆ, ಕಾರ್ಯದ ಪಾರದರ್ಶಕತೆ ಮತ್ತು ಸರ್ವರ ಕಲ್ಯಾಣವನ್ನು ಒದಗಿಸುತ್ತೇವೆ. ನಮ್ಮ ಹೆಗಲ ಮೇಲೆ ಭಾರತದ ನಾಗರಿಕರು ಹೊರಿಸಿರುವ ದಿನದಿಂದ ದಿನಕ್ಕೆ ಹೆಚ್ಚುತ್ತಿರುವ ಚುನಾವಣಾ ಜನಾದೇಶದ ಜವಾಬ್ದಾರಿಯು, ನಮ್ಮ ಕಾರ್ಯಗಳಲ್ಲಿ ಜನರು ಹೊಂದಿರುವ ನಂಬಿಕೆಯನ್ನು ಪ್ರತಿಬಿಂಬಿಸುತ್ತದೆ.

ಲೇಖಕ :
ಹರ್ದೀಪ್ ಎಸ್ ಪುರಿ,
ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ,
ವಸತಿ ಮತ್ತು ನಗರ ವ್ಯವಹಾರಗಳ ಸಚಿವ,
ಭಾರತ ಸರ್ಕಾರ, ನವದೆಹಲಿ.

ರಾಷ್ಟ್ರೀಯ ಕೃಷಿ ವಿಕಾಸ ಯೋಜನೆಯಡಿ ಅರ್ಜಿ ಆಹ್ವಾನ

ಚಿತ್ರದುರ್ಗ, ಮೇ ೨೦

೨೦೨೧-೨೨ನೇ ಸಾಲಿನಲ್ಲಿ ರಾಷ್ಟ್ರೀಯ ಕೃಷಿ ವಿಕಾಸ ಯೋಜನೆಯಡಿ ಪಶುಪಾಲನಾ ಮತ್ತು ಪಶುವೈದ್ಯ ಸೇವಾ ಇಲಾಖೆ ವತಿಯಿಂದ ರೈತರಿಗೆ ಶೇ. ೫೦ ರಷ್ಟು ಸಹಾಯಧನದಲ್ಲಿ ನೆಲಹಾಸು (cow mat) ಹಾಗೂ ರಾಷ್ಟ್ರೀಯ ಕೃಷಿ ವಿಕಾಸ ಯೋಜನೆ ಯಡಿ ರಸಮೇವು ತಯಾರಿಕೆಗೆ ಅಗತ್ಯ ವಾದ ಮೇವು ಬೀಜದ ಮಿನಿಕಿಟ್, ಪ್ಲಾಸ್ಟಿಕ್ ಶೀಟ್, ಸೈಲೇಜ್ ಚೀಲಗಳನ್ನು ಉಚಿತವಾಗಿ ವಿತರಿಸಲು ಅರ್ಹ ಫಲಾನುಭವಿಗಳಿಂದ ಅರ್ಜಿ ಆಹ್ವಾನಿಸ ಲಾಗಿದೆ. ಅರ್ಜಿ ಸಲ್ಲಿಸಲು ಮೇ ೩೦ ಕೊನೆ ದಿನವಾಗಿದೆ.

ಪ್ರತಿ ಫಲಾನುಭವಿಯು ಪ್ರೂಟ್ ಐ.ಡಿ. ಗುರುತಿನ ಸಂಖ್ಯೆ ಹೊಂದಿರಬೇಕಾಗಿರುತ್ತದೆ. ಪ್ರತಿ ಫಲಾನುಭವಿಗಳು ಮೇವು ಬೆಳೆಯಲು ಭೂಮಿಯನ್ನು ಹೊಂದಿರಬೇಕು. ನೀರಾವರಿ ಇದ್ದವರಿಗೆ ಆದ್ಯತೆ. ಇಲಾಖೆಯಿಂದ ನೀಡಿರುವ ಅಥವಾ ಸ್ವಂತ ಮೇವು ಕತ್ತರಿಸುವ ಯಂತ್ರವನ್ನು ಹೊಂದಿರುವ ಫಲಾನುಭವಿಗಳಿಗೆ ಮೊದಲ ಆದ್ಯತೆ ಹಾಗೂ ಕಡ್ಡಾಯವಾಗಿ ಕನಿಷ್ಠ ೦೨ ಜಾನುವಾರುಗಳನ್ನು ಹೊಂದಿರಬೇಕು.

ಹೆಚ್ಚಿನ ಮಾಹಿತಿಗಾಗಿ ಚಿತ್ರದುರ್ಗ ಪಶು ಆಸ್ಪತ್ರೆ ಮುಖ್ಯ ಪಶು ವೈದ್ಯಾಧಿಕಾರಿ ೯೭೪೧೯೨೭೦೦೭, ಚಳ್ಳಕೆರೆ ಪಶು ಆಸ್ಪತ್ರೆ ಮುಖ್ಯ ಪಶು ವೈದ್ಯಾಧಿಕಾರಿ ೯೪೪೪೮೮೬೪೯, ಹೊಳಲ್ಕೆರೆ ಪಶು ಆಸ್ಪತ್ರೆ ಮುಖ್ಯ ಪಶು ವೈದ್ಯಾಧಿಕಾರಿ ೯೯೪೫೨೯೪೦೭, ಹಿರಿಯೂರು ಮುಖ್ಯ ಪಶು ವೈದ್ಯಾಧಿಕಾರಿ ೯೪೪೮೫ ೩೩೭೫೩, ಮೊಳಕಾಲ್ಮುರು ಪಶು ಆಸ್ಪತ್ರೆ ಮುಖ್ಯ ಪಶು ವೈದ್ಯಾಧಿಕಾರಿ ೯೪೪೯೧ ೨೮೨೦೨ ಸಂಪರ್ಕಿಸಲು ಪಶುಪಾಲನಾ ಮತ್ತು ಪಶು ವೈದ್ಯಸೇವಾ ಇಲಾಖೆ ಉಪ ನಿರ್ದೇಶಕರು ತಿಳಿಸಿದ್ದಾರೆ.

ಸುದ್ದಿ - ಸುದ್ದಿಗೊಂದು ಗುದ್ದು

ಸಹಾಯಕ ಪ್ರಾಧ್ಯಾ